**ಶ್ರೀ ಪಿ. ಬೈರೇಗೌಡ:** ತಮಗೆ ಅಧಿಕಾರ ಇದೆ ಮಾನ್ಯ ಅಧ್ಯಕ್ಷರೇ, ತಾವು ಒಪ್ಪಿಸಬೇಕು ಈ ವಿಚಾರವನ್ನು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ಒಪ್ಪಿಸಿ ಎಂದು ಹೇಳುವ ಅಧಿಕಾರ ತಮಗಿದೆ, ದಯವಿಟ್ಟು ತಮ್ಮ ಅಧಿಕಾರವನ್ನು ಉಪಯೋಗಿಸಬೇಕು.

**Mr. Speaker:** I will examine it.

**ಶ್ರೀ ಕೆ.ಬಿ. ಕೋಳಿವಾಡ್:** ಶ್ರೀ ಬೈರೇಗೌಡರು ಹೇಳಿರುವ ಹಾಗೆ ಮೂರು ಕೋಟಿ ರೂಪಾಯಿ ಅವ್ಯವಹಾರವಾಗಿದೆಯೆನ್ನುವುದು ಸತ್ಯಕ್ಕೆ ದೂರವಾದ ಸಂಗತಿ, ಆದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ಕೈಗೊಳ್ಳಬೇಕಾಗಿತ್ತು, ಆದರೆ ನನ್ನ ಕಡೆ ಆ ಅಧಿಕಾರವಿಲ್ಲ, ಪಿ.ಡಬ್ಲ್ಯೂ.ಡಿಗೆ ಕಳುಹಿಸಿದ್ದೇವೆ. ಈಗ ನನ್ನ ಕಡೆ ಅಧಿಕಾರ ಬಂದಿದೆ, ನಾನು ಅವರಿಗೆ ಷೋಕಾಸ್ ನೋಟಿಸ್ ಕೊಟ್ಟಿದ್ದೇನೆ. ಒಂದು ಸಾರಿ ಅಥವಾ ಎರಡು ಸಾರಿ ಅವಕಾಶವನ್ನು ಕೊಡುತ್ತೇನೆ, ಉತ್ತರ ಬರಲಿಲ್ಲ ಅಂದರೆ ಎಕ್ಸ್‌ಪಾರ್ಟಿ ಎಂದು ತೆಗೆದುಕೊಂಡು appropriate action will be taken.

**ಗುಳೇದಗುಡ್ಡದ ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡ ಕುರಿತು**

373(2695): ಶ್ರೀ ನಂಜಯ್ಯನ ಮಠ್ ಎಸ್.ಜಿ. (ಗುಳೇದಗುಡ್ಡ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಳೇದಗುಡ್ಡದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಯಾವ ಕಟ್ಟಡಗಳಲ್ಲಿ ಜರುಗುತ್ತಿವೆ;

ಆ) ಕಟ್ಟಡಗಳ ಮಾಲೀಕತ್ವವು ಮೊದಲು ಪುರಸಭೆಯ ವಶದಲ್ಲಿತ್ತೆ;

ಇ) 1973ರಲ್ಲಿ ಆಗಿನ ಪುರಸಭೆಯವರು ಸದರಿ ಕಟ್ಟಡಗಳನ್ನು ಬೇರೆಯವರಿಗೆ ದಾನ ಮಾಡಿರುವುದು ನಿಜವೇ;

ಈ) ಪುರಸಭೆಯವರು ಬೇರೆಯವರಿಗೆ ದಾನ ಮಾಡುವ ಪೂರ್ವ, ಸರ್ಕಾರದ ಅನುಮತಿ ಪಡೆದಿದ್ದಾರೆಯೇ?

ಶ್ರೀ ಪ್ರೋ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಸರ್ಕಾರಿ ಪದವಿ ಪೂರ್ವ ಕಾಲೇಜು, ಗುಳೇದಗುಡ್ಡ ಇದು ಸಿ.ಟಿ.ಎಸ್. ನಂ. 2206ಎ ಕಟ್ಟಡದಲ್ಲಿ ಹಾಗೂ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯು 227ಎ 1ಬಿ ಹಾಗೂ 227ಎ 1ಸಿ ಕಟ್ಟಡಗಳಲ್ಲಿ ಜರುಗುತ್ತಿವೆ.

ಆ) ಇಲ್ಲ.

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

**ಪ್ರೊ ಬಿ.ಕೆ. ಚಂದ್ರಶೇಖರ್:** ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನೇರವಾಗಿ ನಮ್ಮ ಇಲಾಖೆಗೆ ಸಂಬಂಧಪಟ್ಟಿಲ್ಲವೆಂದು ನಾನು ಹೇಳುತ್ತೇನೆ. ಬಹುಶಃ ಮಾನ್ಯ ಸದಸ್ಯರು ಬೇರೆ ಇಲಾಖಾ ಸಚಿವರಿಗೆ ಆ ಪ್ರಶ್ನೆಯನ್ನು ಉದ್ದೇಶಿಸಿದ್ದರು ಎಂದು ನನಗೆ ಅನ್ನಿಸುತ್ತಿದೆ, ಇದಕ್ಕೆ ಬೇಕಾದ ಮಾಹಿತಿ ನಿನ್ನೆ, ಮೊನ್ನೆ ಹುಡುಕಾಡಿದೆವು ಆದರೆ ಆ ಮಾಹಿತಿ ಸಿಕ್ಕಿಲ್ಲ.

**ಅಧ್ಯಕ್ಷರು:** ನೋಡಿ ಅವರು ನೇರವಾಗಿ ಪ್ರಶ್ನೆ ಅವರಿಗೆ ಸಂಬಂಧಪಟ್ಟದ್ದಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ಜಿ. ನಂಜಯ್ಯಮಠ್:** ಮಾನ್ಯ ಅಧ್ಯಕ್ಷರೇ, ನಿಜ ನಾನು ಪ್ರಶ್ನೆಯನ್ನು ಪೌರಾಡಳಿತ ರಾಜ್ಯ ಸಚಿವರಿಗೆ ಬರೆದು ಕೇಳಿದ್ದೇನೆ, ಆದರೆ ಉತ್ತರ ಪ್ರಾಥಮಿಕ : ಪ್ರೌಢಶಿಕ್ಷಣ ಸಚಿವರು ಹೇಳುತ್ತಿರುವುದು ನನಗೆ ಅರ್ಥವಾಗಲಿಲ್ಲ. ಆದ್ದರಿಂದ ಪೌರಾಡಳಿತ ಸಚಿವರಿಗೆ ಸಂಬಂಧಿಸಿದುದ್ದರಿಂದ ಅವರ ಗಮನಕ್ಕೆ ಈಗಾಗಲೇ ತಂದಿದ್ದೆನು, ಈಗ ಹೇಗೆ ಮಾಡುವುದು ಎಂಬುದು ನನಗೆ ಅರ್ಥವಾಗುತ್ತಿಲ್ಲ.

**ಅಧ್ಯಕ್ಷರು:** ಅಯಿತು, ಕಳುಹಿಸಿಕೊಡೋಣ ಬಿಡಿ.

**ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಈ ಪ್ರಶ್ನೆ ಯಾರಿಗೆ ಸೇರಿದ್ದು ಎಂದು ಅವರು ಕೇಳುತ್ತಿದ್ದಾರೆ.

ಅಧ್ಯಕ್ಷರು:- ಅಯಿತು, ಅಲ್ಲಿಗೆ ಕಳುಹಿಸಿಕೊಡೋಣ, ನಂಜಯ್ಯನ ಮಠ್‌ರವರೇ, We will take it up on some other day.

**Sri D.B. Chandregowda:-** The question may please be transferred.

**ಶ್ರೀ ಎಸ್.ಜಿ. ನಂಜಯ್ಯಮಠ್:-** ಇದು ಸಾರ್ವಜನಿಕ ಪ್ರಶ್ನೆ ಇದೆ. ಆದಕಾರಣ ಅಲ್ಲಿ ಸರ್ಕಾರಿ ಬಾಲಕರ ಶಾಲೆ....

**ಅಧ್ಯಕ್ಷರು:** ಸರಿಸ್ವಾಮಿ, ನಾನು ಒಪ್ಪಿಕೊಂಡೆ. ಆದರೆ ಮಂತ್ರಿಗಳು ಉತ್ತರ ಹೇಳಬೇಕಲ್ಲ? ಪೌರಾಡಳಿತ ಮಂತ್ರಿಗಳು ನೋಡಿ ಅಲ್ಲೇ ಇದ್ದಾರೆ. ಹೇಳಿ ಮಿ. ಕುಮಾರ ಬಂಗಾರಪ್ಪ...

**ಶ್ರೀ ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯಮಂತ್ರಿ):-** ಈ ಶಾಲೆಯ ಬಗ್ಗೆ ಪೌರಾಡಳಿತದ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ನನ್ನ ಹತ್ತಿರ ಪ್ರಸ್ತಾಪ ಮಾಡಿದ್ದರು. ಇದರ ಮೇಲೆ ನಾವು ಎನ್‌ಕ್ವೈರಿ ಮಾಡಬೇಕೋ ಅಥವಾ ಅದರ ಬಗ್ಗೆ ರೆಕಾರ್ಡ್ಸ್ ಎಲ್ಲಾ ತರಿಸಿಕೊಳ್ಳಬೇಕೋ ಎಂದು ಯೋಚಿಸಿ ರೆಕಾರ್ಡ್ಸ್ ಎಲ್ಲಾ ಬಂದ ಮೇಲೆ ಮಾನ್ಯ ಶಾಸಕರ ಜೊತೆಯಲ್ಲಿ ಮಾತನಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ಜಿ. ನಂಜಯ್ಯಮಠ್:-** ಈ ಕಟ್ಟಡ ನಮ್ಮದು, ಇದನ್ನು ಬೇಕೆಂದೇ ಮುನಿಸಿ ಪಾಲಿಟಿಯವರು ಬೇರೆಯವರಿಗೆ ದಾನರೂಪವಾಗಿ ಕೊಟ್ಟಿರತಕ್ಕಂಥಾದ್ದು ಇದೆ. ಸರ್ಕಾರದ ಪೂರ್ವಾಪರ ಅನುಮತಿಯನ್ನು ಪಡೆದುಕೊಳ್ಳದೇ ಇರುವುದರಿಂದ ಕಾನೂನು ಮುಖಾಂತರ ಇವತ್ತು ಸರ್ಕಾರ ತನ್ನ ಅಧಿಕಾರಿಗಳನ್ನು ಕೋರ್ಟಿಗೆ ಕಳುಹಿಸತಕ್ಕಂಥ ಪ್ರಮೇಯ ಇದೆ. ಅದು ಕಳುಹಿಸಿಕೊಡತಕ್ಕಂಥಾದ್ದು ಆಗಬೇಕೆಂದು ಅವರ ಗಮನಕ್ಕೆ ನಾನು ತರುತ್ತಿದ್ದೇನೆ.

**ಶ್ರೀ ಕುಮಾರ ಬಂಗಾರಪ್ಪ:-** ಮಾನ್ಯ ಅಧ್ಯಕ್ಷರೇ, ಈಗಾಗಲೇ ರೆಕಾರ್ಡ್ಸ್‌ನ್ನು ಮೊದಲು ನೋಡತಕ್ಕಂಥ ಅವಶ್ಯಕತೆ ಇದೆ. ಅದನ್ನು ನೋಡಿದ ತಕ್ಷಣ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

**ಅಧ್ಯಕ್ಷರು:-** ಬೇಗನೇ ಮಾಡಿ.